ಇರಲಿಲ್ಲ... ಹೀಗನಿಸುವಾಗ ಯೋಚನೆ ಮುಗ್ಗರಿಸಿ ಸುಮ್ಮನಾದೆ.

ಚಿನ್ನು ಮುಂದೇನು ಆಡಿಯಾಳೆಂದು ಭಾವೀ ಬೀಗರಿಗೂ ಹೆಚ್ಚಾಗಿ, ನನಗೂ ನೀಲಿಗೂ ಕಾಯುವುದಾಯಿತು.

'ಏನಿಲ್ಲ, ಅಂಕಲ್... ಮುಂದಿನ ವಾರ ನಾನು ಕಾಂಬೋಡಿಯಾಕ್ಕೆ ಹೋಗುತಾ ಇದ್ದೀನಿ... ಶೇಷ್ನೂ ಬರಹೇಳಿದೀನಿ... ಇಬ್ಬರೂ ಒಂದೆರಡು ದಿವಸ ಜೊತೇಲಿದ್ದು ಒಂದಷ್ಟು ಒಡಂಬಡಿಸೋದಿದೆ...' ಚಿನ್ನು ಅಸ್ಖಲಿತವಾಗಿ ಹೇಳಿದಳು. ಸ್ಫಟಿಕದಷ್ಟು ಸ್ವಚ್ಛ ಮಾತು. ಗುರುಚರಿತ ತುಸುವೇ ಹೌಹಾರಿದಂತನಿಸಿದ. ಏನಾಯಿತೋ ಕಾಣೆ –ಶಾಂಭವಿ ಮಾತ್ರ, ಆ ಕೂಡಲೆ ಚಿನ್ನುವಿನ ಮಾತನ್ನು ಅನುಮೋದಿಸಿ ತಲೆದೂಗಿದಳು. 'ಅಷ್ಟೆಲ್ಲ ಗಾಬರಿ ಪಡೋದೇನಿಲ್ಲ, ಅಂಕಲ್... ಇಬ್ಬರೂ ಬೇರೆ ಬೇರೆ ರೂಮಿನಲ್ಲಿರುತೀವಿ. ನಾನು ನನ್ನ ಫ್ರೆಂಡ್ಸ್ ಜೊತೆ ಹೋಗುತಾ ಇರೋದು... ಶೇಷಪ್‌ಗೆ ಇದನ್ನ ನಿಮ್ಮೆದುರು ಹೇಳೋಕೆ ಸಂಕೋಚವಂತೆ... ನಾನೇ ಹೇಳುತೀನಿ ಅಂತಂದೆ, ಅಷ್ಟೆ... ಓಕೇ ಅಲ್ಲವಾ, ಅಂಕಲ್?'

ಶಾಂಭವಿ, ಹಿಂದೆಮುಂದೆ ಮಾಡದೆ ಸರಕ್ಕನೆ ಸೈಯೆಂದುಬಿಟ್ಟಳು. ನಾನಂತೂ ಆಶ್ಚರ್ಯದ ನಡುವೆಯೇ ಮಾತು ತೋಚದೆ ಕುಳಿತೆ. ನೀಲಿಗೆ ಮಾತ್ರ, ಈ ಕುರಿತು ಯಾವ ಗೋಜೂ ಇದ್ದಂತಿರಲಿಲ್ಲ. 'ಅಯಾಮ್ ಫೈನ್ ವಿತ್ ದಿಸ್...' ನೀಲಿ ಹೇಳುವಾಗ, ಗುರುಚರಿತನಿಗೂ ಯೆಸ್ಸನ್ನಲಾಗದೆ ದಾರಿಯಿರಲಿಲ್ಲ.

'ಇದೇನೇ, ಚಿನ್ನು–ನೀನು ಹೇಳಿದ್ದು? ನೀನು ಮಾಡುತಿರೋದು ಸರಿಯಾ?' ಗುರುಚರಿತನನ್ನೂ, ಶಾಂಭವಿಯನ್ನೂ ಕಾರಿನವರೆಗೂ ಬೀಳ್ಕೊಟ್ಟು ಒಳಬಂದಿದ್ದೇ ತಡ – ಮಗಳನ್ನು ಕೆದಕಿಬಿಟ್ಟೆ. 'ಅಲ್ಲಾ... ಈ ಕಾಂಬೋಡಿಯಾ ವಿಸಿಟ್ ಬಗ್ಗೆ ಇಲ್ಲೀ ತನಕ ಹೇಳೇ ಇರಲಿಲ್ಲವಲ್ಲೇ?!'

'ಅಯ್ಯೋ ಅಮ್ಮ... ಸುಮ್ಮನೆ ದಿಗಿಲಾಗಬೇಡ...' ಚಿನ್ನು ಕಣ್ಮಿಟುಕಿಸಿ ನಕ್ಕಳು. 'ಇವೊತ್ತು ಬೆಳಿಗ್ಗೆ ಅಷ್ಟೇ ಇದು ಡಿಸೈಡಾಗಿದ್ದು... ನಾನೇ ಅವನಿಗೆ ಕಾಂಬೋಡಿಯಾದಲ್ಲಿ ಸಿಗೋಣ ಅಂತಂದೆ... ಅಲ್ಲಿಗೆ ನನ್ನ ಜೊತೆ ಯಾವ ಫ್ರೆಂಡ್ಸೂ ಬರಲ್ಲ. ನಾನೊಬ್ಬಳೇ ಹೋಗುತಾ ಇದೀನಿ...'

'....?!!'

'ಅವನಿಗೇ ಟಿಕೆಟ್ ಬುಕ್ಕ್ ಮಾಡು ಅಂತ ಹೇಳಿದೆ... ಮೀನಮೇಷ ಮಾಡಿದ. ಮದುವೆ ಆಗಬೇಕು ಅಂದರೆ ಇದನ್ನ ಮಾಡಬೇಕು ಅಂತ ಪಟ್ಟುಹಿಡಿದು ಕೇಳಿದೆ... ನಿಮ್ಮಮ್ಮ ಅಪ್ಪ ಏನಂದುಕೋತಾರೆ... ನಮ್ಮಪ್ಪನಿಗೆ ಗೊತ್ತಾದರೆ ಅಂತ ಶಂಕೆ ಮಾಡಿದ... ಮಂಕೇ ನಾನೇ ನಿನ್ನಪ್ಪನಿಗೆ ಹೇಳಿ ಒಪ್ಪಿಸುತೀನಿ ಅಂತಂದೆ...'

ಈ ಮಾತಿಗೆ ನಾನು ಬೆಚ್ಚಿದರೆ, 'ಭೇಷ್ ಮಗಳೇ... ಭೇಷ್...' ಎಂದು ನೀಲಿ ಹೇಳಿದರು. 'ನಮ್ಮ ಕಾಲದಲ್ಲಿ ನಾವು ಮಾಡದೇ ಇರೋದನ್ನ ನೀನು ಮಾಡುತಿದ್ದೀ ಅನ್ನೋದೇ ಖುಷಿ, ಗೊತ್ತಾ?!' ಅನ್ನುತ್ತ ಮಗಳನ್ನು ಹೊಗಳಿದರು.

ನಾನು ನಿಂತಲ್ಲೇ ಮತ್ತಷ್ಟು ಸ್ತಬ್ಧಯಿಸಿ, ಅಪ್ಪನನ್ನೂ ಮಗಳನ್ನೂ ಏಕತ್ರ ನೋಡುತ್ತ ಪೆಕರುಮೋರೆ ತಾಳಿದೆ.

'ಅಮ್ಮ... ನಿನಗಿದೆಲ್ಲ ಗೊತ್ತಾಗಲ್ಲ, ಸುಮ್ಮನಿರು... ಕಂಡು ಗೊತ್ತಿರದ ಗಂಡಸಿನ ಜೊತೆ ಒಂದು ಜೀವಮಾನ ಒಪ್ಪಿಸೋದೇನು ಸುಲಭಾನಾ? ಅದೂ ಬರೇ ಸುಡುಗಾಡು ಡಿವೋರ್ಸುಗಳ ಇಪ್ಪತ್ತೊಂದನೇ ಶತಮಾನದಲ್ಲಿ' ಚಿನ್ನು ಸ್ಪಷ್ಟವಾಗಿ ಆಡಿದಳು. 'ನೋಡಮ್ಮ, ಫ್ರೆಂಡ್ಸೆಲ್ಲ